ಪರಮಾನಂದವಾಯಿತು. ವಿದುರನು ದ್ವಾರಕೆಯ ಸಮಾಚಾರ ಕೇಳಿದಾಗ ಉದ್ಧವನು ದುಃಖವನ್ನು ತಡೆಯಲಾರದೆ ಬಿಕ್ಕಿ ಬಿಕ್ಕಿ ಅತ್ತನು. "ವಿದುರ, ಏನೆಂದು ಹೇಳಲಿ? ಶ್ರೀಕೃಷ್ಣನು ದೇಹತ್ಯಾಗ ಮಾಡಿದನು. ಅದಕ್ಕಿಂತ ಮುಂಚೆ ನಾನು ಆತನ ಬಳಿಯಲ್ಲೇ ಇದ್ದೆನು. ಅವನು ನನ್ನನ್ನು ನೋಡಿ ಹೀಗೆ ಹೇಳಿದನು: 'ಉದ್ಧವ, ನಿನ್ನ ಭಕ್ತಿ ಮತ್ತು ವಿಶ್ವಾಸಗಳು ನನಗೆ ಮೆಚ್ಚಿಗೆಯಾಗಿವೆ. ನಾನು ನಿನಗೆ ಭಾಗವತವನ್ನು ಉಪದೇಶಿಸುವೆನು. ಅನಂತರ ನೀನು ನರನಾರಾಯಣರ ಆಶ್ರಮಕ್ಕೆ ತೆರಳಿ ತಪಸ್ಸು ಮಾಡುತ್ತಿದ್ದು ದೇಹತ್ಯಾಗ ಮಾಡಿ ವೈಕುಂಠಲೋಕಕ್ಕೆ ಬರುವೆ. ಈ ಭಾಗವತವು ವೇದ ಉಪನಿಷತ್ತುಗಳನ್ನು ಗ್ರಹಿಸಲಾರದವರಿಗೆ, ಮುಗ್ಧರಿಗೆ, ಇನ್ನಿತರರಿಗೆ ಮುಕ್ತಿಪ್ರದಾಯಕವಾದ ಗ್ರಂಥವಾಗಿದೆ.' " "ಉದ್ಧವ, ಆ ಭಾಗವತವನ್ನು ನೀನು ನನಗೆ ಉಪದೇಶಿಸುವೆಯಾ?" ಎಂದು ವಿದುರನು ಕೇಳಿಕೊಂಡನು. ಆ ಮಾತಿಗೆ ಉದ್ಧವನು, "ಗಂಗಾ ನದಿ ತೀರದಲ್ಲಿರುವ ಮೈತ್ರೇಯ ಮಹಾಮುನಿಗಳು ನಿನಗೆ ಭಾಗವತವನ್ನು ಬೋಧಿಸುತ್ತಾರೆ. ಅವರು ಅಲ್ಲಿ ನಿನಗಾಗಿಯೇ ಕಾಯುತ್ತಿದ್ದಾರೆ" ಎಂದು ಹೇಳಿ, ನರನಾರಾಯಣರ ಆಶ್ರಮಕ್ಕೆ ಹೊರಟುಹೋದನು. ವಿದುರನು ಮೈತ್ರೇಯ ಮಹಾಮುನಿಗಳನ್ನು ಕಂಡು ಅವರಿಂದ ಭಾಗವತಾಮೃತವನ್ನು ಸವಿದು ಮುಕ್ತಿಯನ್ನು ಹೊಂದಿದನು.

**ಕಪಿಲಾವತಾರ**

ಮಾನವನೇ ಬ್ರಹ್ಮನ ಪರಿಪೂರ್ಣವಾದ ಮತ್ತು ಕಡೆಯ ಸೃಷ್ಟಿ. ಅನಂತರ ಬ್ರಹ್ಮನು ತಪಸ್ಸು, ವಿದ್ಯೆ ಮತ್ತು ಜ್ಞಾನಗಳಿಂದ ಕೂಡಿದ ಅನೇಕ ಋಷಿಗಳನ್ನು ಕೂಡ ಸೃಜಿಸಿದನು. ಇವರಿಗೆ ತನ್ನಲ್ಲಿನ ವಿದ್ಯೆಯನ್ನೆಲ್ಲಾ ಧಾರೆಯೆರೆದನು. ಅಂತಹ ಆದಿ ಋಷಿಗಳಲ್ಲಿ ಕರ್ದಮನೂ ಒಬ್ಬ. ಆತನು ತನ್ನ ಸೃಷ್ಟಿಯಾದೊಡನೆ ಬ್ರಹ್ಮದೇವರಿಗೆ ನಮಸ್ಕರಿಸಿ, ತನ್ನ ಜನನದ ಉದ್ದೇಶವೇನೆಂದು ಕೇಳಿದನು. ಆಗ ಬ್ರಹ್ಮನು ಪ್ರಜೋತ್ಪತ್ತಿ ಕಾರ್ಯವನ್ನು ಮಾಡಬೇಕೆಂದು ಅವನಿಗೆ ಆದೇಶಿಸಿದನು.

ಬಳಿಕ ಕರ್ದಮ ಋಷಿಯು ಸರಸ್ವತೀ ನದಿತೀರಕ್ಕೆ ಬಂದನು. ಅಲ್ಲಿ ಒಂದು ಪರ್ಣಕುಟೀರವನ್ನು ಕಟ್ಟಿಕೊಂಡು ಧರ್ಮಪರಾಯಣಳಾದ ಪತ್ನಿಗಾಗಿ ಭಗವಂತನನ್ನು ಕುರಿತು ತಪಸ್ಸು ಮಾಡಿದನು. ಕರ್ದಮನ ಭಕ್ತಿಗೆ ಮೆಚ್ಚಿದ ಶ್ರೀಮನ್ನಾರಾಯಣನು ಪ್ರತ್ಯಕ್ಷನಾದನು. "ಬ್ರಹ್ಮನ ನಿರ್ದೇಶನದಂತೆ ನಡೆದುಕೊಳ್ಳುತ್ತಿರುವ ನಿನಗೆ ಸ್ವಾಯಂಭುವ ಮನುವು ತನ್ನ ಮಗಳಾದ ದೇವಹೂತಿಯನ್ನು ವಿವಾಹ ಮಾಡಿಕೊಡುತ್ತಾನೆ. ಅದಕ್ಕಾಗಿ ನಾಳೆಯೇ ನಿನ್ನ ಆಶ್ರಮಕ್ಕೆ ಬರುತ್ತಾನೆ. ನಿನಗೆ ಒಂಬತ್ತು ಜನ ಹೆಣ್ಣುಮಕ್ಕಳು ಹುಟ್ಟುತ್ತಾರೆ. ಅದರ ಜೊತೆಗೆ ನಿನ್ನ ಪತ್ನಿಯಲ್ಲಿ ನಾನೂ ಕೂಡ ಹುಟ್ಟುವೆನು" ಎಂದು ಹೇಳಿ ಅದೃಶ್ಯನಾದನು.

ಭಗವಂತನ ಪ್ರೇರಣೆಯಂತೆ ಸ್ವಾಯಂಭುವ ಮನುವು ತನ್ನ ಮಗಳನ್ನು ಕರ್ದಮ ಋಷಿಗೆ ಕೊಟ್ಟು ಮದುವೆ ಮಾಡಿದನು. ದೇವಹೂತಿಯು ರಾಜಕುಮಾರಿಯಾಗಿದ್ದರೂ, ವಿನಯ ಮತ್ತು ಸೌಜನ್ಯದಿಂದ ಪತಿಯನ್ನು ಸೇವಿಸುತ್ತಿದ್ದಳು. ಕರ್ದಮ ಋಷಿಯು ತನ್ನಲ್ಲಿ ಜನಿಸಿದ ಒಂಬತ್ತು ಕನ್ಯೆಯರನ್ನು ಒಂಬತ್ತು ಋಷಿಗಳಿಗೆ ಧಾರೆಯೆರೆದುಕೊಟ್ಟನು. ಕೊನೆಯಲ್ಲಿ ದಂಪತಿಗಳ ಕೋರಿಕೆಯಂತೆ ಅವರಿಗೆ ಪುತ್ರ ಸಂತಾನವಾಯಿತು. ಅವನೇ ಶ್ರೀಮನ್ನಾರಾಯಣನ ಅವತಾರವಾದ ಕಪಿಲ ಋಷಿ. ಈ ಬಾಲಕ ಹುಟ್ಟಿದೊಡನೆಯೇ ಕರ್ದಮ ಋಷಿಯು ತಪಸ್ಸಿಗಾಗಿ ಅರಣ್ಯಕ್ಕೆ ತೆರಳಿದನು.

ದೇವಹೂತಿಯು ಮಗುವಿನ ಆರೈಕೆಯಲ್ಲಿಯೇ ದಿನ ಕಳೆದಳು. ತನ್ನ ಮಗ ವಿಷ್ಣುವಿನ ಅವತಾರವೆಂದು ಅವಳಿಗೆ ತಿಳಿದಿತ್ತು. ಒಂದು ದಿನ ತನಗೆ ಮುಕ್ತಿಮಾರ್ಗವನ್ನು ಕರುಣಿಸಬೇಕೆಂದು ಆತನಲ್ಲಿ ಪ್ರಾರ್ಥಿಸಿದಳು. "ತಾಯಿಯೇ, ಈ ಜ್ಞಾನಕಾರ್ಯಕ್ಕಾಗಿಯೇ ನನ್ನ ಅವತಾರವಾಗಿದೆ" ಎಂದು ಹೇಳುತ್ತ ಕಪಿಲನು ಅದಕ್ಕೆ ಸಮ್ಮತಿಸಿದನು. ಆತನ ಸಂದೇಶವನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು:

ಅಧ್ಯಾತ್ಮಯೋಗವೇ ಎಲ್ಲ ಮನುಷ್ಯರಿಗೂ ಆತ್ಯಂತಿಕ ಕಲ್ಯಾಣವನ್ನು ಉಂಟುಮಾಡುವ ಸಾಧನ. ಪ್ರತಿಯೊಂದು ಜೀವಿಯ ಬಂಧ ಮತ್ತು ಮೋಕ್ಷಗಳಿಗೆ ಮನಸ್ಸೇ ಕಾರಣ. ಆ ಮನಸ್ಸು ವಿಷಯಗಳಲ್ಲಿ ಆಸಕ್ತವಾದರೆ ಬಂಧನಕ್ಕೆ ಕಾರಣವಾಗುತ್ತದೆ ಮತ್ತು ಪರಮಾತ್ಮನಲ್ಲಿ ಅನುರಕ್ತವಾದರೆ ಅದೇ ಮೋಕ್ಷಕ್ಕೆ ಕಾರಣವಾಗುತ್ತದೆ.

ಆತ್ಮವು ಪ್ರಕೃತಿಯಿಂದ ಅತಿರಿಕ್ತವಾದುದು; ಅದನ್ನು ಮೀರಿರುವಂಥದ್ದು. ಅದು ಅದ್ವಿತೀಯವೂ, ಭೇದರಹಿತವೂ, ಸ್ವಯಂಪ್ರಕಾಶವೂ, ಸೂಕ್ಷ್ಮವೂ ಆದುದು. ಸಂಗ ಅಥವಾ ಆಸಕ್ತಿಯೇ ಆತ್ಮನಿಗೆ ಬಂಧಕಾರಕವೆಂದು ವಿವೇಕಿಗಳು ತಿಳಿಯುತ್ತಾರೆ.

ಭಗವಂತನಲ್ಲಿ ಅನನ್ಯಭಾವವುಳ್ಳ ಭಕ್ತರು ಸಹನಶೀಲರಾಗಿರುತ್ತಾರೆ; ದಯಾಳುಗಳಾಗಿರುತ್ತಾರೆ. ಸಮಸ್ತ ಜೀವಿಗಳಿಗೂ ಹಿತವನ್ನು ಉಂಟುಮಾಡುತ್ತಾರೆ. ದೃಢಭಕ್ತಿಯುಳ್ಳವರಾಗಿ ಭಗವಂತನ ಪವಿತ್ರವಾದ ಕಥೆಗಳ ಶ್ರವಣ–ಕೀರ್ತನೆಗಳನ್ನು ಮಾಡುತ್ತಾರೆ. ಅಂಥವರಿಗೆ ಸಂಸಾರದ ಸಂತಾಪಗಳು ಲೇಶಮಾತ್ರವೂ ಕಷ್ಟವನ್ನೂ ಉಂಟುಮಾಡುವುದಿಲ್ಲ.

ಯಾವ ಫಲಾಪೇಕ್ಷೆಯೂ ಇಲ್ಲದೆ ಸಹಜಭಾವದಿಂದ ಕೂಡಿದ ಅನನ್ಯಚಿತ್ತವನ್ನು ಶುದ್ಧಸತ್ವಮಯನಾದ ಭಗವಂತನಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದಕ್ಕೇ 'ನಿರ್ವ್ಯಾಜ ಭಕ್ತಿ' ಎಂದು ಹೆಸರು. ಇದು ಮುಕ್ತಿಗಿಂತಲೂ ಶ್ರೇಷ್ಠವಾದುದು.

ಭಗವಂತನೇ ಪ್ರಕೃತಿ ಮತ್ತು ಪುರುಷರಿಬ್ಬರಿಗೂ ಪ್ರಭುವಾಗಿದ್ದಾನೆ. ಸಮಸ್ತ ಪ್ರಾಣಿಗಳ ಆತ್ಮವೂ ಅವನೇ. ಭಗವಂತನನ್ನು ಬಿಟ್ಟು ಯಾರನ್ನು ಆಶ್ರಯಿಸಿದರೂ ಕೂಡ, ಮೃತ್ಯುರೂಪವಾದ ಮಹಾಭಯದಿಂದ ಬಿಡುಗಡೆ ಸಾಧ್ಯವಿಲ್ಲ. ಈ ಜ್ಞಾನವು ಭಕ್ತಿ, ವೈರಾಗ್ಯ ಮತ್ತು ಚಿತ್ತೈಕಾಗ್ರತೆಯಿಂದ ಮಾತ್ರ ಸಾಧ್ಯ. ಈ ಜ್ಞಾನದ ಮೂಲಕ 'ಭಗವಂತನು ಅಂತರಾತ್ಮನಾಗಿ ನಮ್ಮ ಶರೀರದಲ್ಲಿಯೇ ಇದ್ದಾನೆ' ಎಂದು ವಿವೇಕದಿಂದ ತಿಳಿದುಕೊಂಡು, ಆತನನ್ನು ಧ್ಯಾನಿಸಬೇಕು.

ಇಷ್ಟು ಹೇಳಿ, ಭಗವಾನ್ ಕಪಿಲನು ಪ್ರಕೃತಿ–ಪುರುಷರ ವಿವೇಕವನ್ನೂ, ಯೋಗದ ಅಷ್ಟಾಂಗವಿಧಾನವನ್ನೂ ತಾಯಿಗೆ ಬೋಧಿಸಿದನು. ಕಡೆಯಲ್ಲಿ ಭಕ್ತಿಯೋಗದ ಮಹತ್ವವನ್ನು ಸವಿಸ್ತಾರವಾಗಿ ವಿವರಿಸಿದನು.

ಹೀಗೆ ದೇವಹೂತಿಯು ಮಗನಿಂದ ಸಂಪೂರ್ಣ ಜ್ಞಾನಯೋಗವನ್ನು ಅರಿತಳು; ಮಹಾವೈರಾಗ್ಯವನ್ನು ಹೊಂದಿ ತನ್ನ ದೇಹಾಭಿಮಾನವನ್ನು ಸಂಪೂರ್ಣವಾಗಿ ತೊರೆದಳು. ಕಪಿಲ ಮುನಿಯ ಉಪದೇಶದಂತೆ ಭಗವಂತನನ್ನೇ ಧ್ಯಾನಿಸುತ್ತಾ ದೇಹತ್ಯಾಗ ಮಾಡಿ ಮುಕ್ತಿಯನ್ನು ಪಡೆದಳು.

# ಬುದ್ಧ ಮರಳಿ ತಾಯ್ನಾಡಿಗೆ

ಸ್ವಾಮಿ ರಾಘವೇಶಾನಂದ

**(ಹಿಂದಿನ ಸಂಚಿಕೆಯಿಂದ)**

*(ಬುದ್ಧ ಕಪಿಲವಸ್ತುವಿನಲ್ಲಿ ಇದ್ದಾನೆ. ಅಂದಿನ ಭಿಕ್ಷೆಯನ್ನು ತನ್ನ ತಂದೆಯಾದ ಶುದ್ಧೋಧನ ಮಹಾರಾಜನ ಅರಮನೆಯಲ್ಲಿ ಸ್ವೀಕರಿಸಿದ್ದಾನೆ. ಬಳಿಕ ಅರಮನೆಯ ಮುಂದಿನ ಉದ್ಯಾನವನದಲ್ಲಿ ನೆರೆದ ರಾಜಪರಿವಾರದವರು ಮತ್ತು ಸಾರ್ವಜನಿಕರಿಗೆ ಧರ್ಮೋಪದೇಶ ಮಾಡುತ್ತಿದ್ದಾನೆ.)*

“ನಿರ್ವಾಣವೆಂದರೆ ಅಜ್ಞಾನವನ್ನು, ಮೌಢ್ಯವನ್ನು, ಕೋಪವನ್ನು ಬುಡಸಹಿತ ಕಿತ್ತುಹಾಕುವುದು. ಗೆಳೆಯರೇ! ತಿಳಿಯಾದ ಝರಿಯನ್ನೋ, ಬೆಳಗಿನ ಸೂರ್ಯನ ಕಿರಣಗಳನ್ನೋ ಗಮನಿಸಲು ಸಮಯ ಮಾಡಿಕೊಳ್ಳಿ. ಅದನ್ನು ಅವಲೋಕಿಸುತ್ತಿರುವಾಗ ಶಾಂತಿ, ಸಂತೋಷ, ಬಿಡುಗಡೆ – ಇವನ್ನು ಅನುಭವಿಸಬಲ್ಲಿರಾ? ನೀವು ಇನ್ನೂ ಕೂಡ ನಿಮ್ಮ ದುಃಖ ಮತ್ತು ಆತಂಕಗಳಿಂದ ಬಂಧಿಸಲ್ಪಟ್ಟಿದ್ದೀರಾ? ಹಾಗಾದರೆ, ನಿಮ್ಮ ಉಸಿರಾಟವನ್ನೂ, ನಿಮ್ಮ ಅದ್ಭುತ ಶರೀರ ಮತ್ತು ಮನಸ್ಸುಗಳ ಅಸೀಮ ವಿಸ್ಮಯಕಾರಿ ಶಕ್ತಿಯನ್ನೂ ಅನುಭವಿಸಲಾರಿರಿ. ನಾನು ಕಂಡುಹಿಡಿದಿರುವ ಮಾರ್ಗವು ನಿಮ್ಮ ದುಃಖ ಮತ್ತು ಆತಂಕಗಳನ್ನು ದಾಟಿಹೋಗಿ, ಅವುಗಳ ಹಿಂದಿರುವ ನಿತ್ಯಸತ್ಯವನ್ನು ಸಾಕ್ಷಾತ್ಕರಿಸಿಕೊಡುತ್ತದೆ. ದುಃಖ ಮತ್ತು ಆತಂಕಗಳ ಸ್ವರೂಪವನ್ನು ಆಳವಾಗಿ ಗಮನಿಸುವುದರಿಂದ, ಸಮ್ಯಗ್ದರ್ಶನವಾಗುತ್ತದೆ. ನಾನು ಈ ಮಾರ್ಗವನ್ನು ಹಲವು ಜನರೊಂದಿಗೆ ಹಂಚಿಕೊಂಡಿದ್ದೇನೆ. ಅವರೂ ಸಹ ಈ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದರಲ್ಲಿ ಸಫಲರಾಗಿದ್ದಾರೆ.”



ಎಲ್ಲರೂ ಬುದ್ಧನ ಧಾರ್ಮಿಕ ಬೋಧನೆಯಿಂದ ಪ್ರಭಾವಿತರಾದರು. ರಾಜ, ರಾಣಿ ಗೌತಮಿ ಮತ್ತು ಯಶೋಧರೆಯರ ಹೃದಯಗಳು ಸಂತೋಷದಿಂದ ತುಂಬಿ ತುಳುಕುತ್ತಿದ್ದವು. ಬುದ್ಧನ ಈ ಹೊಸ ಮಾರ್ಗದ ಬಗ್ಗೆ ತಿಳಿದುಕೊಂಡು, ತಾವೂ ಅದನ್ನು ತಮ್ಮ ಜೀವನದಲ್ಲಿ ಆಚರಿಸಿ, ಜ್ಞಾನವನ್ನು ಪಡೆಯಬೇಕು ಎಂಬ ಹಂಬಲ ಅವರೆಲ್ಲರಿಗೂ ಉಂಟಾಯಿತು.

ಹೀಗೆ ಬುದ್ಧನು ಧರ್ಮಪ್ರವಚನವನ್ನು ಕೊನೆಗೊಳಿಸಿ ಎದ್ದುನಿಂತನು. ರಾಜನು ಬುದ್ಧ ಮತ್ತು ಅವನ ಅನುಯಾಯಿಗಳನ್ನು ಬೀಳ್ಕೊಡಲು ಅರಮನೆಯ ಹೊರದ್ವಾರದವರೆಗೂ ಜೊತೆಗೇ ನಡೆದುಬಂದನು. ಅಲ್ಲಿ ನೆರೆದಿದ್ದವರೆಲ್ಲರೂ ಬುದ್ಧನ ಸಾಧನೆಯನ್ನು ಮೆಚ್ಚಿದರು. ಇಂತಹ ಮಹಾನ್ ವ್ಯಕ್ತಿಯನ್ನು ಮಗನನ್ನಾಗಿ ಪಡೆದುದಕ್ಕಾಗಿ ಮಹಾರಾಜನನ್ನು ಅಭಿನಂದಿಸಿದರು.

ನ್ಯಗ್ರೋಧ ಉದ್ಯಾನವನವು ಸ್ವಲ್ಪ ಸಮಯದಲ್ಲಿಯೇ ಬೌದ್ಧವಿಹಾರವಾಗಿ ಮಾರ್ಪಟ್ಟಿತು. ಅಲ್ಲಿದ್ದ ವಿಶಾಲ ವೃಕ್ಷಗಳು ತಂಪು ನೆರಳನ್ನು ನೀಡುತ್ತಿದ್ದವು. ಅನೇಕ ಜನರು ಬುದ್ಧನಿಂದ ಭಿಕ್ಷುದೀಕ್ಷೆಯನ್ನು ಪಡೆದುಕೊಂಡರು. ಅವರಲ್ಲಿ ಶಾಕ್ಯ ರಾಜವಂಶದ ಪರಿವಾರದವರೂ ಇದ್ದರು.

ಯಶೋಧರೆಯು ಬುದ್ಧನನ್ನು ಭೇಟಿ ಮಾಡಲು ಅನೇಕ ಸಲ ನ್ಯಗ್ರೋಧ ವನಕ್ಕೆ ಬಂದಳು. ತನ್ನ ಅತ್ತೆ ಮತ್ತು ಮಗ ರಾಹುಲನನ್ನೂ ಅವಳು ತನ್ನೊಡನೆ ಕರೆತರುತ್ತಿದ್ದಳು. ತಾನು ಕೂಡ ಬುದ್ಧನ ಉಪದೇಶಗಳನ್ನು ಏಕಾಗ್ರಚಿತ್ತದಿಂದ ಕೇಳಿದಳು. ಅಲ್ಲದೆ, ಏಕಾಂತದಲ್ಲಿ ಬುದ್ಧನನ್ನು ನೇರವಾಗಿ ಸಂದರ್ಶಿಸಿ, ಧರ್ಮಮಾರ್ಗವನ್ನು ಅನುಸರಿಸುವ ಕ್ರಮವನ್ನೂ ಹಾಗೂ ಸಮಾಜಕ್ಕೆ ಸೇವೆ ಸಲ್ಲಿಸುವ ವಿಧಾನವನ್ನೂ ಕೇಳಿ ಅರಿತುಕೊಂಡಳು. ಬುದ್ಧ ಈ ವಿಚಾರದಲ್ಲಿ ಅನೇಕ ಅನುಷ್ಠಾನಪ್ರದ ಸಾಧನೆಗಳನ್ನು ಆಕೆಗೆ ಹೇಳಿಕೊಟ್ಟನು. ಉಸಿರಾಟದ ಮೇಲೆ ಗಮನವಿಟ್ಟು ಧ್ಯಾನ ಮಾಡುವ ಕ್ರಮ, ಆ ಸ್ಥಿತಿಯಲ್ಲಿ ತನ್ನ ಹೃದಯದೊಳಗೆಯೇ ಶಾಂತಿ ಮತ್ತು ಆನಂದಗಳನ್ನು ಅನುಭವಿಸುವುದು – ಇವೆಲ್ಲವನ್ನೂ ತಿಳಿಸಿಕೊಟ್ಟನು. ಇದರಿಂದ ಅವಳಿಗೆ ತಿಳಿಯಿತು, ಮೊದಲು ತನ್ನಲ್ಲಿ ಶಾಂತಿ, ಸಂತೋಷಗಳನ್ನು ತುಂಬಿಕೊಳ್ಳದೆ ಬೇರೆಯವರಿಗೆ ನಿಜವಾಗಿ ಸಹಾಯ ಮಾಡಲು ಸಾಧ್ಯವಿಲ್ಲ ಎಂದು. ತನ್ನನ್ನು ತಾನು ಆಳವಾಗಿ ಅರಿತುಕೊಳ್ಳುವುದರಿಂದ, ಇತರರನ್ನು ಪ್ರೀತಿಸುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬಹುದೆಂದು ಅವಳಿಗೆ ಗೊತ್ತಾಯಿತು. ಇದರಿಂದ ಯಶೋಧರೆ ಅಪಾರವಾದ ನೆಮ್ಮದಿಯನ್ನು ಪಡೆದುಕೊಂಡಳು. ಸೇವೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಶಾಂತಿ, ಸಂತೋಷಗಳು ಒಂದೇ ಕಾಲದಲ್ಲಿ ಉಂಟಾಗುತ್ತವೆಯೆಂಬುದನ್ನು ಅವಳು ಮನಗಂಡಳು. ತನ್ನ ಸೊಸೆಯಂತೆಯೇ ಮಹಾರಾಣಿಯಾದ ಗೌತಮಿಯೂ ಕೂಡ ಸಾಧನೆಯ ಮಾರ್ಗದಲ್ಲಿ ಬಹಳಷ್ಟು ಪ್ರಗತಿಯನ್ನು ಸಾಧಿಸಿದಳು.

ಒಂದು ದಿನ ಯಶೋಧರೆಯು ಬುದ್ಧ, ಕಲುವಾಯಿ, ನಾಗಸಮಲ ಮತ್ತು ಗೌತಮಿಯನ್ನು ಭೋಜನಕ್ಕಾಗಿ ತನ್ನ ಅರಮನೆಗೆ ಆಹ್ವಾನಿಸಿದಳು. ಊಟವಾದನಂತರ ತಾನು ಸೇವೆ ಮಾಡುತ್ತಿದ್ದ ಹಳ್ಳಿಯೊಂದಕ್ಕೆ ಕರೆದುಕೊಂಡು ಹೋದಳು. ಅಲ್ಲಿ ಅವಳು ಕೆಲ ಬಡಮಕ್ಕಳ ಸೇವೆಯನ್ನು ಮಾಡುತ್ತಿದ್ದಳು. ರಾಹುಲನೂ ಜೊತೆಯಲ್ಲಿ ಹೊರಟನು. ಬುದ್ಧನು ಬಾಲಕನಾಗಿದ್ದಾಗ ಮೊದಲ ಬಾರಿಗೆ ಧ್ಯಾನಸ್ಥಿತಿಯನ್ನು ತಲುಪಿದ

ಮರವನ್ನೂ ಅವರೆಲ್ಲ ಸಂದರ್ಶಿಸಿದರು. ಆ ಘಟನೆ ನಡೆದು ಅದಾಗಲೇ ೨೭ ವರ್ಷಕ್ಕೂ ಮೇಲಾಗಿತ್ತು. ಆದರೂ ಅದು ನಿನ್ನೆ, ಮೊನ್ನೆ ನಡೆದಂತೆ ಭಾಸವಾಯಿತು. ಇದರಿಂದ ಬುದ್ಧ ಅಚ್ಚರಿಗೊಂಡನು. ಈಗ ಆ ಮರ ಹೆಮ್ಮೆಯಿಂದ ಬೆಳೆದುನಿಂತಿತ್ತು.

ಯಶೋಧರೆಯು ಅಲ್ಲಿ ನೆರೆದಿದ್ದ ಬಡಮಕ್ಕಳನ್ನು ಆ ಮರದ ಕೆಳಗೆ ಶಿಸ್ತಿನಿಂದ ಕೂಡಿಸಿದಳು. ಅವರಿಗೆಲ್ಲ ಬುದ್ಧನಿಗೆ ಗೌರವ ಪೂರ್ವಕವಾಗಿ ನಮಸ್ಕರಿಸಲು ಹೇಳಿದಳು. ಏಳರಿಂದ ಹನ್ನೆರಡು ವರ್ಷದವರೆಗಿನ ಆ ಮಕ್ಕಳನ್ನು ಕಂಡು, ಬುದ್ಧನಿಗೆ ಸಂತೋಷವಾಯಿತು. ಅವರಲ್ಲಿ ಕೆಲವರು ಬುದ್ಧನ ಬಾಲ್ಯ ಸ್ನೇಹಿತರ ಮಕ್ಕಳೂ ಇದ್ದರು. ಬುದ್ಧನಿಗೆ ಕುಳಿತುಕೊಳ್ಳಲು ಬಿದಿರಿನಿಂದ ಮಾಡಿದ ವಿಶೇಷ ಆಸನವನ್ನು ತರಿಸಲಾಗಿತ್ತು. ಎಲ್ಲರೂ ಅವನ ಸುತ್ತಲೂ, ಚಾಪೆಯ ಮೇಲೆ ಕುಳಿತುಕೊಂಡರು. ಮಕ್ಕಳೆಲ್ಲ, ಬುದ್ಧನು ತಮಗೆ ಏನು ಹೇಳುವನೋ ಎಂದು ಕಾತರರಾಗಿದ್ದರು.

ಬುದ್ಧನು ಮೊದಲಿಗೆ ತನ್ನ ಬಾಲ್ಯ ಜೀವನವನ್ನು ನೆನೆಸಿಕೊಂಡನು. ಆಮೇಲೆ ಕರುಣೆ, ಅನುಕಂಪೆ ಹುಟ್ಟಿಸುವ ಘಟನೆಯೊಂದನ್ನು ಅವರಿಗೆ ವಿವರಿಸಿದನು. ಬುದ್ಧನ ಚಿಕ್ಕಪ್ಪನ ಮಗ ಒಮ್ಮೆ ಒಂದು ಹಂಸವನ್ನು ಬಾಣದಿಂದ ಹೊಡೆದು ಉರುಳಿಸಿದ್ದನು. ಆಗ ಬುದ್ಧನು ಅದಕ್ಕೆ ಶುಶ್ರೂಷೆ ಮಾಡಿ ಪ್ರಾಣ ಉಳಿಸಿದನು. ಈ ಕಥೆಯನ್ನು ಬುದ್ಧ ಮಕ್ಕಳಿಗೆ ಹೇಳಿದನು. ಬಾಲಕರೆಲ್ಲರೂ ಆಸಕ್ತಿಯಿಂದ ಈ ಕತೆಯನ್ನು ಕೇಳಿದರು. ರಾಹುಲನೂ ಆ ಬಾಲಕರ ಮಧ್ಯೆ ಇದ್ದನು.

ಮಕ್ಕಳೆಲ್ಲ ಬುದ್ಧನ ಮಾತನ್ನು ಇನ್ನೂ ಕೇಳಲು ಇಷ್ಟಪಟ್ಟರು. ಬುದ್ಧ ಇದಕ್ಕೆ ಸಂತೋಷ ವ್ಯಕ್ತಪಡಿಸಿದನು. ಆಗ ಆತನು ತನ್ನ ಹಿಂದಿನ ಜನ್ಮಗಳನ್ನು ನೆನೆಸಿಕೊಂಡು ಅಲ್ಲಿಂದ ಒಂದು ಕತೆಯನ್ನು ಹೇಳಿದನು:

ಬಹಳ ಹಿಂದೆ ಹಿಮಾಲಯದ ತಪ್ಪಲಿನಲ್ಲಿ ಮೇಘನೆಂಬ ಯುವಕನು ವಾಸಿಸುತ್ತಿದ್ದನು. ಅವನು ದಯಾಳು ಹಾಗೂ ಶ್ರಮಜೀವಿ. ಬಡವನಾಗಿದ್ದರೂ ವಿದ್ಯಾಭ್ಯಾಸ ಮಾಡಬೇಕೆಂಬ ಹಂಬಲ ಅವನಿಗೆ. ಅದಕ್ಕಾಗಿ ರಾಜಧಾನಿಗೆ ಹೊರಟ. ಅವನ ಜೊತೆ ಇದ್ದ ವಸ್ತುಗಳೆಂದರೆ, ಒಂದು ಚಿಕ್ಕ ಪಾತ್ರೆ, ಉಟ್ಟ ಬಟ್ಟೆ, ಮೇಲಂಗಿ ಮತ್ತು ಒಂದು ಟೋಪಿ ಮಾತ್ರ. ಅವನು ಬಹುದೂರ ನಡೆಯಬೇಕಾಗಿತ್ತು. ಮಾರ್ಗಮಧ್ಯದಲ್ಲಿ ಬರುವ ಹೊಲಗಳಲ್ಲಿ ಅವನು ಕೆಲಸಮಾಡುತ್ತಿದ್ದ. ಅದರಿಂದ ಅಂದಂದಿನ ಊಟಕ್ಕೆ ಬೇಕಾದ ಹಣ ಅವನಿಗೆ ಸಿಗುತ್ತಿತ್ತು. ಆ ಹಣದಲ್ಲಿಯೇ ಅಲ್ಪಸ್ವಲ್ಪ ಉಳಿಸಿಕೊಳ್ಳುತ್ತಿದ್ದ. ರಾಜಧಾನಿಯನ್ನು ಸೇರಿದಾಗ ಅವನ ಬಳಿ ಐನೂರು ವರಹಗಳಿದ್ದವು. ಅಂದು ನಗರದಲ್ಲಿ ಏನೋ ಉತ್ಸವ ಏರ್ಪಾಟಾಗಿತ್ತು. ಎಲ್ಲೆಲ್ಲೂ ಸಂಭ್ರಮ. ಇದರ ಬಗ್ಗೆ ವಿಚಾರಿಸೋಣವೆಂದು ಸುತ್ತಮುತ್ತ ಕಣ್ಣುಹಾಯಿಸಿದ. ಒಬ್ಬಳು ಯುವತಿ ಅವನ ಪಕ್ಕದಲ್ಲಿಯೇ ನಡೆದುಕೊಂಡು ಹೋಗುತ್ತಿದ್ದಳು. ಅವಳ ಕೈಯಲ್ಲಿ ಒಂದು ಬುಟ್ಟಿಯಿತ್ತು. ಅದರ ಒಳಗೆ ಅರೆಬಿರಿದ ಕಮಲದ ಹೂವುಗಳಿದ್ದವು.

"ಇವತ್ತು ಇಲ್ಲಿ ಯಾವ ಉತ್ಸವ ನಡೆಯುತ್ತಿದೆ?" ಎಂದು ಮೇಘನು ಅವಳನ್ನು ಕೇಳಿದನು. ಅದಕ್ಕೆ ಉತ್ತರವಾಗಿ ಆಕೆ ಹೀಗೆ ಹೇಳಿದಳು: "ನೀನು ರಾಜಧಾನಿಗೆ ಹೊಸಬನೆಂದು ಕಾಣುತ್ತದೆ. ಇಲ್ಲದಿದ್ದರೆ, ಗುರು ದೀಪಂಕರರು ಬರುವುದು ನಿನಗೆ ಗೊತ್ತಾಗಿರುತ್ತಿತ್ತು. ಅವರು ಸಕಲಜೀವಿಗಳ ಬಾಳನ್ನು ಬೆಳಗುವ ಮಹಾತ್ಮರು. ಅವರು ಇಲ್ಲಿನ ರಾಜನ ಮಗ. ಸತ್ಯದ ಹಾದಿಯನ್ನು ಹುಡುಕಿಕೊಂಡು, ಬಹಳ ವರ್ಷಗಳ ಹಿಂದೆಯೇ ಸಂಸಾರವನ್ನು ತ್ಯಜಿಸಿದರು. ಸಾಧನೆ ಮಾಡಿ ಸಿದ್ಧಿ ಪಡೆದರು. ಅವರು ತೋರುವ ಮಾರ್ಗವು ಇಡೀ ಜಗತ್ತನ್ನೇ ಬೆಳಗುತ್ತದೆ. ಅವರ ಗೌರವಾರ್ಥ ಈ ಸಿದ್ಧತೆಗಳೆಲ್ಲ ನಡೆದಿವೆ."

ಆ ಯುವತಿಯ ಮಾತು ಕೇಳಿ ಮೇಘನಿಗೆ ಆನಂದವಾಯಿತು. ಇಂಥ ಜ್ಞಾನಿಯೊಬ್ಬರ ದರ್ಶನವಾಗುವುದೆಂದು ಹಿರಿಹಿರಿ ಹಿಗ್ಗಿದನು. ಆ ಗುರುಗಳಿಗೆ ಏನನ್ನಾದರೂ ಅರ್ಪಿಸಿ, ಅವರ ಶಿಷ್ಯನಾಗಬೇಕೆಂದು ಅವನಿಗೆ ಆಸೆಯುಂಟಾಯಿತು. ಅವನು ಆ ಯುವತಿಯ ಕೈಯಲ್ಲಿದ್ದ ಪುಷ್ಪಗಳನ್ನು ನೋಡಿದನು. "ಈ ತಾವರೆ ಹೂವುಗಳಿಗೆ ಎಷ್ಟು ಹಣ ಕೊಟ್ಟೆ?" ಎಂದು ವಿಚಾರಿಸಿದನು. ಮೇಘ ಒಬ್ಬ ವರ್ಚಸ್ಸು ಮತ್ತು ಸೌಹಾರ್ದತೆಯನ್ನು ಬೆಳೆಸಿಕೊಂಡಿರುವ ಸಭ್ಯ ವ್ಯಕ್ತಿಯೆಂದು ಆ ಯುವತಿ ನಿರ್ಧರಿಸಿದಳು. "ನಾನು ಇವುಗಳಲ್ಲಿ ಐದು ಹೂವುಗಳಿಗೆ ಮಾತ್ರ ಹಣ ಕೊಟ್ಟು ಕೊಂಡುಕೊಂಡೆ. ಉಳಿದವನ್ನು ನಮ್ಮ ಮನೆಯ ಕೊಳದಿಂದ ಕಿತ್ತು ತಂದೆ" ಎಂದಳು.

ಅದಕ್ಕೆ ಮೇಘನು, "ಈ ಐದು ಹೂವುಗಳಿಗೆ ಎಷ್ಟು ಬೆಲೆ ಕೊಟ್ಟಿದ್ದೀಯೆ?" ಎಂದು ಕೇಳಿದನು. "ಐನೂರು ವರಹಗಳು" ಎಂದಳು ಆ ಯುವತಿ. "ಹಾಗಿದ್ದಲ್ಲಿ ನಾನು ಐನೂರು ವರಹಗಳನ್ನು ಕೊಡುವೆನು. ದಯವಿಟ್ಟು ಈ ಹೂವುಗಳನ್ನು ನನಗೆ ಕೊಡು. ಅವುಗಳನ್ನು ನಾನು ಜ್ಞಾನಿ ದೀಪಂಕರರಿಗೆ ಅರ್ಪಿಸಿ ಧನ್ಯನಾಗುತ್ತೇನೆ" ಎಂದನು ಮೇಘ. "ನಾನೂ ಇವುಗಳನ್ನು ದೀಪಂಕರರಿಗೆ ಕೊಡಲು ತೆಗೆದುಕೊಂಡು ಹೋಗುತ್ತಿದ್ದೇನೆ" ಎಂದ ಯುವತಿ, ಆ ಹೂವುಗಳನ್ನು ನೀಡಲು ನಿರಾಕರಿಸಿದಳು.

ಮೇಘನು ಅವಳಿಗೆ ಒತ್ತಾಯಿಸಲು ಆರಂಭಿಸಿದನು: "ಸರಿ, ನೀನು ನಿನ್ನ ಮನೆಯ ಕೊಳದಿಂದ ತಂದಿರುವ ಆ ಎರಡು ಹೂವುಗಳನ್ನು ದೀಪಂಕರರಿಗೆ ಅರ್ಪಿಸು. ಉಳಿದ ಐದು ಹೂವುಗಳನ್ನು ನನಗೆ ಮಾರಿಬಿಡು. ನಾನು ಗುರುಗಳಿಗೆ ಏನಾದರೂ ಅರ್ಪಿಸಲೇಬೇಕು. ಇಂಥ ಜ್ಞಾನಿಯನ್ನು ಸಂಧಿಸುತ್ತಿರುವುದು ಮೊದಲನೆಯ ಸಲ. ನಾನು ಅವರನ್ನು ಭೇಟಿಯಾಗಲೇಬೇಕು. ನನ್ನನ್ನು ಅವರ ಶಿಷ್ಯನಾಗಿ ಸ್ವೀಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಗುರುವಿನ ಬಳಿಗೆ ಬರಿಕೈಯಲ್ಲಿ ಹೋಗಬಾರದು. ನೀನು ನನಗೆ ಆ ಐದು ಹೂವುಗಳನ್ನು ಮಾರಿದರೆ, ಜೀವನಪರ್ಯಂತ ನಾನು ನಿನಗೆ ಆಭಾರಿಯಾಗಿರುತ್ತೇನೆ."

ಆ ಯುವತಿಗೆ ಏನು ಹೇಳಬೇಕೆಂಬುದೇ ತಿಳಿಯಲಿಲ್ಲ. ತಲೆಬಾಗಿ ನೆಲವನ್ನೇ ನೋಡುತ್ತಿದ್ದಳು. ಹಾಗೆಯೇ ತನ್ನ ಬಲಗಾಲಿನ ಹೆಬ್ಬೆರಳಿನಿಂದ ನೆಲವನ್ನು ಕೆದಕಲಾರಂಭಿಸಿದಳು.